ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ ಕಮಲ್ ಮುಖರ್ಜಿ ಹಾಗೂ ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

ಮೆ || ಓಬಳಾಪುರಂ ಮೈನಿಂಗ್ ಕಂಪನಿ ಪ್ರೈ ಅ., -ವಿರುದ್ಧ ಜಂಟಿ ನಿರ್ದೇಶಕರು ಜಾರಿ ನಿರ್ದೇಶನಾಲಯ ಭಾರತ ಸರ್ಕಾರ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 5962/2016 (ಜಿಎಂ-ಎಂಎಂ-ಸಿ) ಮತ್ತು ಇತರೆ, ದಿನಾಂಕ 13 ನೇ ಮಾರ್ಚ್,2017.

ಆಜ್ಞೆ

ಮುಖ್ಯ ನ್ಯಾಯಮೂರ್ತಿ ಶ್ರೀ ಸುಭೋ ಕಮಲ್ ಮುಖರ್ಜಿ:

ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ವಕೀಲರ ಸಮ್ಮತಿಯ ಮೇಲೆ, ಈ ಎಲ್ಲ ರಿಟ್ ಅರ್ಜಿಗಳ ಸುನಾವಣೆಯನ್ನು ಜೊತೆಜೊತೆಯಲ್ಲಿ ನಡೆಸಲಾಗಿದೆ. ಈ ಎಲ್ಲ ರಿಟ್ ಅರ್ಜಿಗಳು ಒಳಗೊಂಡಿರುವ ಕಾನೂನು ಪ್ರಶ್ನೆಗಳು ಒಂದೇ ರೀತಿಯವುಗಳಾಗಿದೆ.ನ್ಯಾಯಿಕ ಸಂಘರ್ಷವನ್ನು ತಡೆಯುವ ಉದ್ದೇಶದಿಂದ ಈ ಎಲ್ಲ ಅರ್ಜಿಗಳ ಜೊತೆಜೊತೆಯಲ್ಲಿ ಸುನಾವಣೆ ಮಾಡುವುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.ನಮಗೂ ಸಹ ಈ ಸಂಗತಿಗಳೆಲ್ಲವು ಒಂದೇ ರೀತಿಯ ವಸ್ತುವಿಷಯಕ್ಕೆ ಸಂಬಂಧಿಸಿದ ವಿಷಯವಾಗಿದೆ ಎಂಬ ಅಭಿಪ್ರಾಯವಿದೆ.

ಆದಾಗ್ಯೂ ಅನುಕೂಲಕರ ಉದ್ದೇಶಕ್ಕಾಗಿ ನಾವು ರಿಟ್ ಅರ್ಜಿಸಂಖ್ಯೆ: 2016 ರ 5962 ಕ್ಕೆ ಸಂಬಂಧಿಸಿದ ಸಂಗತಿಗಳ ವ್ಯವಹರಣೆಗಳನ್ನು ಮುಂದುವರಿಸಿರುತ್ತೇವೆ.

2. ದಿನಾಂಕ 22 ನೇ ಸೆಪ್ಟೆಂಬರ್, 2010 ರಂದುಸಂಖ್ಯೆ: ಇಸಿಐಆರ್/83/ಬಿಝಡ್/2010 ರಲ್ಲಿ ಜಾರಿ ಮೊಕದ್ದಮೆ ಮಾಹಿತಿ ವರದಿಯ ಪ್ರಾಧಿಕಾರಿಗಳು ಹೂಡಿದ ಮತ್ತು ಜಾರಿ ಮಾಡಿದ ಕ್ರಮಗಳನ್ನು ಪ್ರಶ್ನಿಸಿ ರಿಟ್ ಅರ್ಜಿಸಂಖ್ಯೆ: 2016 ರ 5962 ಅನ್ನು ದಾಖಲಿಸಲಾಗಿದೆ ಮತ್ತು ಜಪ್ತಿಯ ಆದೇಶವನ್ನು, ಲೇವಾದೇವಿ ಪ್ರತಿಬಂಧಕ ಅಧಿನಿಯಮ, 2002 ರ (ಸಂಕ್ಷಿಪ್ತವಾಗಿ ಪಿಎಂಎಲ್ ಅಧಿನಿಯಮ) ಉಪಬಂಧ ಅಡಿಯಲ್ಲಿ ಜಪ್ತಿ, ತಾತ್ಕಾಲಿಕ ಮತ್ತು ಅಂತಿಮ ಜಪ್ತಿ ಆದೇಶವನ್ನು ಸಹ ಸದರಿ ರಿಟ್ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

3. ಶ್ರೀ ಸುಧೀರ್ ನಂದ್ರ ಜೋಗ್ ಮಾನ್ಯ ಹಿರಿಯ ನ್ಯಾಯವಾದಿಗಳು ರಿಟ್ ಅರ್ಜಿದಾರರ ಪರವಾಗಿ ಹಾಜರಾಗಿ ರಿಟ್ ಅರ್ಜಿಯನ್ನು ಸಮರ್ಥಿಸುತ್ತ ಸಂಕ್ಷಿಪ್ತವಾದ ಹಾಗೂ ಆಸಕ್ತಿದಾಯಕ ಅಂಶವನ್ನು ಎತ್ತಿದ್ದಾರೆ.ಅವರು ಪಿಎಂಎಲ್ ಅಧಿನಿಯಮದ ಅಡಿಯಲ್ಲಿ ಆಪಾದಿಸಲಾದ ಆಪಾದನೆಗಳು ಬರುವುದಿಲ್ಲವೆಂದು ರಿಟ್ ಅರ್ಜಿಯಲ್ಲಿ ನಿವೇದಿಸಿರುವರು ಮತ್ತು ಇದರಿಂದ ಪಿಎಂಎಲ್ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ, ರಿಟ್ ಅರ್ಜಿಯನ್ನು ಪ್ರಾಸಿಕ್ಯೂಟ್ ಮಾಡಬಾರದು ಎಂದು ಸಹ ನಿವೇದಿಸಿರುವರು.

4. ಶ್ರೀ ಸುಧೀರ್ ನಂದ್ರಜೋಗ್ ಅವರು ನನ್ನ ಗಮನವನ್ನು ರಿಟ್ ಅರ್ಜಿಗೆ ಲಗತ್ತಿಸಲಾದ ಅನುಬಂಧ-ಬಿ ಯಲ್ಲಿರುವ ಇಸಿಐಆರ್ ಬಗೆಗೆ ಸೆಳೆದಿರುವರು.ಈ ರಿಟ್ ಅರ್ಜಿಯಲ್ಲಿ ನಾವು ಓದಿದ ಆಪಾದನೆಗಳಲ್ಲಿ ಸ್ವಾಧೀನಪಡಿಸಿಕೊಂಡ 17.59 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಗುತ್ತಿಗೆ ಪ್ರದೇಶದ ಹೊರಭಾಗದಿಂದ ಅದನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ತಿಳಿದುಬರುತ್ತವೆ.ಮತ್ತು ಭ್ರಷ್ಟಚಾರ ಪ್ರತಿಬಂಧ ಅಧಿನಿಯಮ, 1988 (ಸಂಕ್ಷಿಪ್ತವಾಗಿ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ) ದ 13 ( 1) (ಡಿ) ಮತ್ತು 13 ( 1) ( ಇ) ಯ

ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ 13 ( 2) ನೇ ಪ್ರಕರಣ ಹಾಗೂ ಭಾರತ ದಂಡ ಸಂಹಿತೆಯ 120 ಬಿ, 420 ಮತ್ತು 411 ನೇ ಪ್ರಕರಣದ ಅಡಿಯಲ್ಲಿ ಎಸಗಿದ ಅಪರಾಧಗಳಾಗಿವೆ ಎಂದು ತಿಳಿದುಬರುತ್ತದೆ.ಹಾಗಾಗಿ, ಜಪ್ತಿಯ ಅಂತಿಮ ಆದೇಶದಲ್ಲಿ ಗುತ್ತಿಗೆ ಪ್ರದೇಶದ ಹೊರಗಡೆಯಿಂದ 29.32 ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಮಾತ್ರವೇ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಆಪಾದಿಸಲಾಗಿದೆ.

5. ಶ್ರೀ ನಂದ್ರಜೋಗ್ ಅವರು ಈ ಅಪರಾಧ ಆರೋಪಗಳು 1 ನೇ ಜೂನ್, 2009 ರಂದು ಮಾತ್ರವೇ ಅಪರಾಧದ ಸೂಚಿಪಟ್ಟಿಯಲ್ಲಿ ಒಳಗೊಂಡಿದೆ ಎಂದು ನಿವೇದಿಸಿರುವರು.ಅವರು 2007 ರ ಜೂನ್ 21 ಮತ್ತು 2009 ರ ಮೇ 15 ರ ನಡುವಿನ ಸಮಯದಲ್ಲಿ ಎಸಗಲಾದ ಆರೋಪಗಳು ಆಪಾದಿತ ಆರೋಪಗಳು ಕಾಗದ ಪುಸ್ತಕದ 225 ನೇ ಪುಟದಲ್ಲಿ ನಮೂದಿತವಾಗಿದೆ ಎಂದು ನಮ್ಮ ಗಮನವನ್ನು ಸೆಳೆದಿರುತ್ತಾರೆ.ಆದುದರಿಂದ ಪಿಎಂಎಲ್ ಅಧಿನಿಯಮಕ್ಕೆ ತಿದ್ದುಪಡಿ ಕಾರ್ಯಾಚರಣೆ ಮಾಡುವ ಮುಂಚೆಯೇ ಈ ಎಲ್ಲ ಅಪರಾಧದ ಕೃತ್ಯವನ್ನು ಎಸಗಲಾಗಿದೆ ಎಂದು ಮನವರಿಕೆ ಮಾಡುವ ರೀತಿಯಲ್ಲಿ ನಿವೇದಿಸಿರುವರು.

6. ಪಿಎಂಎಲ್ ಅಧಿನಿಯಮದ 2 (ಪಿ) ಪ್ರಕರಣದಲ್ಲಿ " ಲೇವಾದೇವಿ " ಎಂಬ ಪದದ ವ್ಯಾಖ್ಯಾನವನ್ನು ನೀಡಲಾಗಿದೆ.ಒಪ್ಪಿಕೊಂಡ ಅರ್ಥವು 3 ನೇ ಪ್ರಕರಣದಲ್ಲಿದೆ.2 (ಯು) ಪ್ರಕರಣದಲ್ಲಿ ಉಪಬಂಧಿಸಿದಂತೆ " ಅಪರಾಧದ ವ್ಯವಹರಣೆಗಳು " ಎಂದರೆ ಯಾವುದೇ ಅಂಥ ಸ್ವತ್ತಿನ ಅಪರಾಧದ ಸೂಚಿಪಟ್ಟಿ ಅಥವಾ ಅದರ ಮೌಲ್ಯಕ್ಕೆ ಸಂಬಂಧಿಸಿದಂತೆ ಅಪರಾಧ ಚಟುವಟಿಕೆಯ ಪರಿಣಾಮವಾಗಿ ಯಾರೇ ವ್ಯಕ್ತಿ ಹೊಂದಿದ ಯಾವುದೇ ಸ್ವತ್ತು ಅಥವಾ ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಪಡೆದ ಆ ಯಾವುದೇ ಸ್ವತ್ತು ಎಂದು ಅರ್ಥೈಸಲಾಗಿದೆ.2 (ವೈ) ಪ್ರಕರಣದಲ್ಲಿ " ಅಪರಾಧ ಸೂಚಿಪಟ್ಟಿ " ಎಂದರೆ ( i) ಅನುಸೂಚಿಯ ' ಎ'ಭಾಗದಲ್ಲಿ ನಿರ್ದಿಷ್ಟ ಪಡಿಸಿದ ಅಪರಾಧಗಳು:ಅಥವಾ(ii) ಅನುಸೂಚಿಯ ' ಬಿ ' ಭಾಗದಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳು, ಅಂಥ ಅಪರಾಧಗಳ ಒಟ್ಟು ಮೌಲ್ಯ ಮೂವತ್ತು ಲಕ್ಷ ರೂ.ಗಳು ಅಥವಾ ಅದಕ್ಕಿಂತ ಹೆಚ್ಚು ರೂಪಾಯಿಗಳನ್ನು ಒಳಗೊಂಡಿದ್ದರೆ; ಅಥವಾ(iii) ಅನುಸೂಚಿಯ ಸಿ ಭಾಗದಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳು.

7. ಶ್ರೀ ಸುಧೀರ್ ನಂದ್ರಜೋಗ್ ಅವರು ಮುಂದುವರೆದು, ಲೇವಾದೇವಿ ಪ್ರತಿಬಂಧಕ (ತಿದ್ದುಪಡಿ) ಅಧಿನಿಯಮ, 2009 ರ ಉಪಬಂಧಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾ, ಈ ಅಪರಾಧಗಳು ಭಾರತ ದಂಡ ಸಂಹಿತೆಯ 120 ಬಿ, 420, 411 ಮತ್ತು 471 ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳಾಗಿವೆ ಮತ್ತು ಈ ಅನುಸೂಚಿತ ಅಪರಾಧಗಳು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1981 ರ ಉಪಬಂಧಗಳ ವ್ಯಾಪ್ತಿಗೂ ಒಳಪಡುತ್ತವೆ ಎಂದು ನಿವೇದಿಸಿರುವರು.ಪೇಪರ್ ಬುಕ್ನ 87 ನೇ ಪುಟದಲ್ಲಿ, ಕೇಂದ್ರ ಸರ್ಕಾರವು ಹೊರಡಿಸಿದ ಅಧಿಸೂಚನೆಯ ಪ್ರತಿಯನ್ನು ಹಾಜರುಪಡಿಸಲಾಗಿರುತ್ತದೆ.ಅದರಲ್ಲಿ ಪಿಎಂಎಲ್ ಅಧಿನಿಯಮದ ತಿದ್ದುಪಡಿ ಉಪಬಂಧಗಳನ್ನು ಉಪಬಂಧಿಸಿದೆ.ಲೇವಾದೇವಿ ಪ್ರತಿಬಂಧಕ (ತಿದ್ದುಪಡಿ) ಅಧಿನಿಯಮ, 2009 ಅನ್ನು ತಿದ್ದುಪಡಿ ಮಾಡಲಾಗಿದೆ.ಈ ತಿದ್ದುಪಡಿ ಅಧಿನಿಯಮವು ಗೊತ್ತುಪಡಿಸಿದ ದಿನಾಂಕದಂದು ಅಂದರೆ 1 ನೇ ಜೂನ್ 2009 ರಿಂದ ಪರಿಣಾಮಕಾರಿಯಾಗಿ ಜಾರಿ ಬಂದಿರುತ್ತದೆ.

8. ಶ್ರೀ ಕೃಷ್ಣ ಎಸ್. ದೀಕ್ಷಿತ್ ಮಾನ್ಯ ಸಹಾಯಕ ಸಾಲಿಸಿಟರ್ ಜನರಲ್ ಇವರು ಪಿಎಂಎಲ್ ಅಧಿನಿಯಮದ 5 ನೇ ಪ್ರಕರಣವನ್ನು ಉಲ್ಲೇಖಿಸಿ ತಮ್ಮ ವಾದವನ್ನು ಮುಂದುವರೆಸಿ ಹೀಗೆ ನಿವೇದಿಸಿರುವರು.ರಿಟ್ ಅರ್ಜಿದಾರನ ವಿರುದ್ಧ ಆಪಾದಿಸಲಾದ ಎಲ್ಲ ಅಪರಾಧಗಳು ಸಿವಿಲ್ ಸ್ವರೂಪದ ಅಪರಾಧಗಳಾಗಿವೆ.2009 ಜೂನ್ನ ಮುಂ

ಚಿತವಾಗಿ ಎಸಗಲಾದ ಅಪರಾಧ ಕೃತ್ಯಗಳೂ ಪೂರ್ವಾನ್ವಯವಾಗಿ ಪಿಎಂಎಲ್ ಅಧಿನಿಯಮ ಅನ್ವಯವಾಗುತ್ತದೆ ಎಂದು ತುಂಬಾ ಭಾವೋದ್ವೇಗದಿಂದ ನಿವೇದಿಸಿರುವರು.

9. ನಾವು ನಮ್ಮ ಗಮನವನ್ನು ರಿಟ್ ಅರ್ಜಿದಾರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು ಮಂಡಿಸಿದ ಮತ್ತು ಪ್ರತ್ಯರ್ಜಿದಾರರ ಪ್ರಾಧಿಕಾರಿಗಳ ಪರವಾಗಿ ಹಾಜರಾದ ಮಾನ್ಯ ಸಹಾಯಕ ಸಾಲಿಸಿಟರ್ ಜನರಲ್ ಅವರು ಮಂಡಿಸಿದ ನಿವೇದನೆಗಳ ಕಡೆಗೆ ಆದ್ಯ ಗಮನವನ್ನು ನೀಡಿರುತ್ತೇವೆ.

10. ರಿಟ್ ಅರ್ಜಿದಾರರು ಎಸಗಿದ ಆಪಾದನೆಯ ಎಲ್ಲಾ ಆರೋಪಗಳು ದಾಖಲೆಗಳಿಂದ ಲೇವಾದೇವಿ ಪ್ರತಿಬಂಧಕ (ತಿದ್ದುಪಡಿ) ಅಧಿನಿಯಮ, 2009 ರ ಅನುಸೂಚಿಯಲ್ಲಿ ಈ ಮುಂಚೆ ಸೇರಿಸಲಾದ ಉಪಬಂಧಗಳು ಈ ಆಪಾದನೆಯ ಆರೋಪಗಳಿಗೆ ಅನ್ವಯವಾಗುವುದಿಲ್ಲ.

11. ಆದುದರಿಂದ, ಜಾರಿ ಮೊಕದ್ದಮೆ ಮಾಹಿತಿ ವರದಿಯು ಮತ್ತು ಅಧಿಕಾರ ವ್ಯಾಪ್ತಿಯ ಹೊರತಾಗಿ ಮಾಡಿದ ಜಪ್ತಿಯ ಆದೇಶ ವಜಾಗೊಳ್ಳಲು ಅರ್ಹವಾಗಿವೆ.ನಾವು ಈಗಾಗಲೇ ತೀರ್ಮಾನಿಸಿರುವಂತೆ ರಿಟ್ ಅರ್ಜಿದಾರರನ್ನು ಅವರ ಆರೋಪಿತ ಆಪಾದನೆಗಳನ್ನು ಪಿಎಂಎಲ್ ಅಧಿನಿಯಮದ ಅಡಿಯಲ್ಲಿ ಅಧಿಸೂಚಿತ ಅಪರಾಧಗಳೆಂದು ಪರಿಗಣಿಸಲು ಬರುವುದಿಲ್ಲ.ಆ ಅಧಿನಿಯಮದ ಅಡಿಯಲ್ಲಿ ವಿಚಾರಣೆ ವ್ಯಾಪ್ತಿಗೂ ಅದು ಒಳಪಡುವುದಿಲ್ಲ.ಈ ಎಲ್ಲ ಅಪರಾಧಗಳೆಲ್ಲವೂ ಗಣಿಗಳ ಮತ್ತು ಭೂ ವಿಜ್ಞಾನ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957, ಅರಣ್ಯ (ಸಂರಕ್ಷಣೆ) ಅಧಿನಿಯಮ, 1980, ಭಾರತ ದಂಡ ಸಂಹಿತೆ ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 ರ ಅಡಿಯಲ್ಲಿ ವ್ಯಾಪ್ತವಾಗುವ ಅಪರಾಧಗಳಾಗಿವೆ.ಪಿಎಂಎಲ್ ಅಧಿನಿಯಮದಲ್ಲಿ ಅಧಿಸೂಚಿಸಿದ ಅಪರಾಧಗಳು ದಿನಾಂಕ 1 ನೇ ಜೂನ್ 2009 ರಿಂದ ಮಾತ್ರವೇ ಪರಿಣಾಮಕಾರಿಯಾಗುವಂತೆ ವ್ಯಾಪ್ತವಾಗುತ್ತದೆ.ಆದುದರಿಂದ ರಿಟ್ ಅರ್ಜಿದಾರರು ಎಸಗಿದ ಅಪರಾಧಗಳು ಪಿಎಂಎಲ್ ಅಧಿನಿಯಮದ ವ್ಯಾಪ್ತಿಗೆ ಒಳಗೊಳ್ಳುವುದಿಲ್ಲ.ಆದುದರಿಂದ, ಜಾರಿ ನಿರ್ದೇಶನಾಲಯ ಪೂರ್ವಾನ್ವಯ ಪರಿಣಾಮದೊಂದಿಗೆ ಪಿಎಂಎಲ್ ಅಧಿನಿಯಮದ ಉಪಬಂಧಗಳು ಅನ್ವಯಿಸಿಕೊಂಡಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.

12. ಅರ್ಜಿದಾರನು ಪಿಎಂಎಲ್ ಅಧಿನಿಯಮದ ಅಡಿಯಲ್ಲಿನ ಅಪರಾಧಗಳಿಗಾಗಿ ವಿಚಾರಣೆ ಮಾಡಬಾರದು ಮತ್ತು ದಂಡಿಸಬಾರದು ಅದು ಅಲ್ಲದೆ, ಪಿಎಂಎಲ್ ಅಧಿನಿಯಮದ ಅಡಿಯಲ್ಲಿನ ಅಧಿಸೂಚಿತ ಅಪರಾಧಗಳಲ್ಲಿ ಅರ್ಜಿದಾರರ ಅಪರಾಧಗಳು ಸೇರಿಲ್ಲದಿರುವಾಗ ಅರ್ಜಿದಾರರನ್ನು ವಿಚಾರಣೆ ಮಾಡುವುದು ಮತ್ತು ದಂಡಿಸುವುದು ಸಮರ್ಥನೀಯ ಕ್ರಮವಾಗಿರುವುದಿಲ್ಲ.ಹಾಗೇನಾದರೂ ವಿಚಾರಣೆ ಅಥವಾ ದಂಡನೆಗೆ ಗುರಿಪಡಿಸಿದರೆ ಭಾರತ ಸಂವಿಧಾನದ 20 ನೇ ಅನುಚ್ಛೇದದ ( 1) ನೇ ಖಂಡದ ಅಡಿಯಲ್ಲಿ ಉಪಬಂಧಿಸಿದ ರಿಟ್ ಅರ್ಜಿದಾರರ ಸಂರಕ್ಷಣೆಯನ್ನು ನಿರಾಕರಿಸಿದಂತೆ ಆಗುತ್ತದೆ.ಭಾರತ ಸಂವಿಧಾನದ 20 ( 1) ನೇ ಅನುಚ್ಛೇದವು ವ್ಯಕ್ತಿಯ ನಿರ್ಣೀತ ಅಪರಾಧಿಯಾಗಿದ್ದರೆ ಅಥವಾ ಘಟನಾ ನಂತರದ ಕಾರ್ಯದಿಂದಾಗಿ ರೂಪಿತವಾದ ಕಾನೂನಿಂದಾಗಿ ವ್ಯಕ್ತಿಯೂ ದಂಡಿತನಾಗುವ ವಿಷಯಕ್ಕೊಳಪಟ್ಟಿದ್ದರೆ ಅದನ್ನು ಈ 20 ( 1) ನೇ ಅನುಚ್ಛೇದವು ಪ್ರತಿಬಂಧಿಸುತ್ತದೆ.ತತ್ಪರಿಣಾಮವಾಗಿ ಜಪ್ತಿಯ ಆದೇಶ ವಜಾಗೊಳ್ಳಲು ಅರ್ಹವಾಗಿದೆ.

ಉಲ್ಲೇಖ:ರಿಟ್ ಅರ್ಜಿಸಂಖ್ಯೆ: 2016 ರ 1440-11441

13. ಹೇಗೆ ಆದಾಗ್ಯೂ, ಈ ರಿಟ್ ಅರ್ಜಿಗಳ ರಿಟ್ ಅರ್ಜಿದಾರರ ಮೊಕದ್ದಮೆಯಲ್ಲಿ ಅತ್ಯಲ್ಪ ಪ್ರಮಾಣದ ವ್ಯತ್ಯಾಸಗಳು ಕಂಡುಬರುತ್ತದೆ.ಮೊದಲ ಅರ್ಜಿದಾರರು ಈ ಮೊಕದ್ದಮೆಯಿಂದ ಮುಕ್ತಗೊಳ್ಳುವವರೆಗೂ ಮೊದಲ ಅರ್ಜಿದಾರರ ವಿರುದ್ಧ ರಿಟ್ ಅರ್ಜಿಯೂ ನಿರರ್ಥಕ ಸ್ವರೂಪದಾಗಿದೆ.

14. ಸಾಧ್ಯವಾದಷ್ಟು ಮಟ್ಟಿಗೆ ಸಂಬಂಧಪಟ್ಟ ಎರಡನೇ ಅರ್ಜಿದಾರರ ಮೇಲೆ ಇರುವ ಆರೋಪವೆನೆಂದರೆ ಅವರ ಸ್ವಂತ ಕ್ವಾರಿಗಳಿಂದ ಕಾರ್ಯಾಚರಣೆ ಮಾಡದೆ ಸುಮಾರು 24,00,000 ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಕಾನೂನುಬಾಹಿರ ಗಣಿಗಾರಿಕೆಯಿಂದ ಮಾಡಿರುವ ಆರೋಪವನ್ನು ಹೊರಿಸಲಾಗಿದೆ.ಅಲ್ಲದೆ ಈ ರಿಟ್ ಅರ್ಜಿಯ ವಿರುದ್ಧ ಇರುವ ಆಪಾದನೆ ಏನೆಂದರೆ ಕಬ್ಬಿಣದ ಅದಿರನ್ನು ಹೊರಗೆ ಮಾರಾಟ ಮಾಡಿರುವುದು ಮತ್ತು ಆ ಮೂಲಕ ಕಾನೂನುಬಾಹಿರವಾಗಿ 480 ಕೋಟಿ ರೂಪಾಯಿಗಳು (ನಾನೂರ ಎಂಬತ್ತು ಕೋಟಿ ರೂಪಾಯಿಗಳು) ಸ್ವಾಧೀನ ಪಡೆದುಕೊಂಡಿರುವುದು ಕಂಡು ಬರುತ್ತದೆ.

15. ರಿಟ್ ಅರ್ಜಿದಾರರನ್ನು ಸಮರ್ಥಿಸುತ್ತಾ ಅವರ ಪರವಾಗಿ ಹಾಜರಾದ ಸುಧೀರ್ ನಂದ್ರಜೋಗ್ ಮಾನ್ಯ ಹಿರಿಯ ನ್ಯಾಯವಾದಿಗಳು ತಮ್ಮ ವಾದದಲ್ಲಿ ಕಬ್ಬಿಣ ಅದಿರಿನ ಕಳವು ಅಥವಾ ಕಾನೂನುಬಾಹಿರ ಗಣಿಗಾರಿಕೆಯ ವಾದಂಶವು ಒಳಗೊಂಡಿದೆ ಈ ಆಪಾದನೆಯ ಪಿಎಂಎಲ್ ಅಧಿನಿಯಮದ ಅಡಿಯಲ್ಲಿ ಅನುಸೂಚಿತ ಅಪರಾಧ ಆಗಿರುವುದಿಲ್ಲ.

16. ಕಳವು ಅಪರಾಧವು ಪಿಎಂಎಲ್ ಅಧಿನಿಯಮದ ಅಡಿಯಲ್ಲಿ ಅನುಸೂಚಿತ ಅಪರಾಧದಲ್ಲಿ ಒಳಗೊಂಡಿರುವುದಿಲ್ಲ, ಮೇಲೆ ಹೇಳಲಾದ ತತ್ವಗಳನ್ನು ಇಲ್ಲಿಯೂ ಸಹ ಅನ್ವಯಿಸಿಕೊಳ್ಳಬಹುದಾಗಿದೆ.ತಿದ್ದುಪಡಿಯಾದ ಪಿಎಂಎಲ್ ಅಧಿನಿಯಮದ ಅಡಿಯಲ್ಲಿ ಈ ರಿಟ್ ಅರ್ಜಿಗಳಲ್ಲಿನ ಅರ್ಜಿದಾರರ ವಿರುದ್ಧ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ನಮಗೆ ಯಾವುದೇ ಗುಣಾರ್ಹತೆ ಕಂಡು ಬರುವುದಿಲ್ಲ.ಆದುದರಿಂದ, ಸದರಿ ಅಧಿನಿಯಮದ ಅಡಿಯಲ್ಲಿ ಅರ್ಜಿದಾರರ ವಿರುದ್ಧ ತೆಗೆದುಕೊಂಡ ಕ್ರಮಗಳನ್ನು ವಜಾ ಮಾಡಲು ಬಾಧ್ಯವಾಗಬೇಕಾಗಿದೆ.

17. ಹೆಚ್ಚಿಗೆಯಾಗಿ ಮೇಲೆ ಮಾಡಿದ ನಿವೇದನೆಗಳಲ್ಲಿ, ಶ್ರೀ ನಂದ್ರಜೋಗ್ ಮಾನ್ಯ ಹಿರಿಯ ವಕೀಲರು ಈ ಎಲ್ಲ ರಿಟ್ ಅರ್ಜಿಗಳಲ್ಲಿ ರಿಟ್ ಅರ್ಜಿದಾರರ ಪರವಾಗಿ ಹಾಜರಾಗಿರುವರು.ರಿಟ್ ಅರ್ಜಿದಾರರ ವಿರುದ್ಧ ಯಾವುದೇ ನಿರ್ಣೀತ ಅಪರಾಧದ ಸಾಧ್ಯತೆ ಆದಷ್ಟು ಕಡಿಮೆ ಇರುವುದರಿಂದ ಯಾವುದೇ ವ್ಯವಹರಣೆ ಮುಂದುವರೆಸಬಾರದು ಎಂದೂ ಸಹ ನಿವೇದಿಸಿರುವರು.ನಿರ್ಣೀತ ಅಪರಾಧದ ಗೈರು ಹಾಜರಿಯಲ್ಲಿ ಜಪ್ತಿಯ ಅಂತಿಮ ಆದೇಶವನ್ನು ನೀಡಬಾರದೆಂದು ಸಹ ನಿವೇದಿಸಿರುವರು.

*18. ಒಂದು ಬಾರಿ ಎಫ್ಐಆರ್ ಆಗಿರುವ ಅಥವಾ ದೃಢೀಕರಿಸಿದ ಅಪರಾಧದ ವರದಿಯಲ್ಲಿ ಇಸಿಐಆರ್‌ನಲ್ಲಿ ನೋಂದಾಯಿತವಾದ ಮತ್ತು ಜಾರಿ ಇಲಾಖೆಯಲ್ಲಿ ಹೊರಡಿಸಿದ ತಾತ್ಕಾಲಿಕ ಜಪ್ತಿ ಆದೇಶವನ್ನು ಸಹ ವರದಿಯಲ್ಲಿ ದಾಖಲಿತವಾಗಿದೆ.ಅ ಆದಾಗ್ಯೂ, ವಿಚಾರಣಾಧೀನ ವ್ಯವಹರಣೆಗಳ ಮುಕ್ತಾಯದಲ್ಲಿ ನಿರ್ಣೀತ ಅಪರಾಧ/ನ್ಯಾಯಿಕ ಅಪರಾಧವನ್ನು ಹೊರತುಪಡಿಸಿ ಜಪ್ತಿಯ ಮತ್ತು ಮುಟ್ಟುಗೋಲು ರೀಕರಿಸುವ ಯಾವುದೇ ಆದೇಶವನ್ನು ಹೊರಡಿಸಬಾರದು.*

* 18 ನೇ ಪ್ಯಾರಾವನ್ನು ಪ್ರತ್ಯಾಯೋಜಿಸಲಾಗಿದೆ.ದಿನಾಂಕ 22 ನೇ ಮಾರ್ಚ್ 2017 ರ ನ್ಯಾಯಾಲಯದ ಆದೇಶವನ್ನು ನೋಡುವುದು.

19. ಆದುದರಿಂದ ನಾವು, ಈ ಎಲ್ಲ ರಿಟ್ ಅರ್ಜಿಗಳನ್ನು ಪುರಸ್ಕರಿಸುತ್ತೇವೆ ಮತ್ತು ಜಾರಿ ಪ್ರಾಧಿಕಾರಿಗಳು ರಿಟ್ ಅರ್ಜಿದಾರರ ವಿರುದ್ಧ ಪ್ರಾರಂಭಿಸಿದ ಕ್ರಮಗಳನ್ನು ವಜಾಗೊಳಿಸಲಾಗಿದೆ.ನಾವು, ರಿಟ್ ಅರ್ಜಿದಾರರ ವಿರುದ್ಧ ಹೊರಡಿಸಿದ ಜಪ್ತಿ ಆದೇಶವು ಸಹ ವಜಾಗೊಂಡಿದೆ ಎಂದು ಆದೇಶಿಸಿದ್ದೇವೆ.

20. ವೆಚ್ಚಗಳಿಗೆ ಯಾವುದೇ ಆದೇಶವಿಲ್ಲ.